ಬೆವಿಕಂ
BESCOM

# ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ ನಿಯಮಿತ

ದೂರವಾಣಿ ಸಂಖ್ಯೆ : 08158-255615, 254528.
ಮೊಬೈಲ್ ಸಂಖ್ಯೆ:-94482 79076
ಇ-ಮೇಲ್ : aeeshiddlagattarural@bescom.co.in
aeebescomrsdsdl@gmail.com,

ರವರ ಕಛೇರಿ
ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ)
ವಾ. ಕಾ & ಪಾಲನಾ ಗ್ರಾಮಿಣ ಉಪ ವಿಭಾಗ, ಬೆವಿಕಂ.,
ಶಿಡ್ಲಘಟ್ಟ.

ಸಂಖ್ಯೆ:ಸಕಾನಿಇಂ(ವಿ)/ಸ.ಲೆ/ಶಿ.ಗ್ರಾ/ಎಫ್-32/25-26/2785-87

ದಿನಾಂಕ : **28.01.2026.**

**ಲಗತ್ತು:**

**ರವರಿಗೆ,**
**ಉಪ ಪ್ರಧಾನ ವ್ಯವಸ್ಥಾಪಕರು (ಕಾನೂನು),**
**ಬೆವಿಕಂ., ನಿಗಮ ಕಛೇರಿ,**
**ಬೆಂಗಳೂರು – 560 001.**

**ಮಾನ್ಯರೇ,**

**ವಿಷಯ:–** ಶ್ರೀ.ಕೆ.ಎನ್.ರಮೇಶ್ ಬಾಬು ಮತ್ತು ಕೆ.ಎನ್.ಮಂಜುನಾಥ ಬಿನ್ ನಾರಾಯಣಪ್ಪ ಸರ್ವೆ.ನಂ.141 ನಲ್ಲಪ್ಪನಹಳ್ಳಿ ರವರು ದಾಖಲಿಸಿದ್ದ ಮೊಕ್ಕದ್ದಮೆ ಸಂಖ್ಯೆ WP No.21248/2023 ರ ಅನುಸರಣಾ ವರದಿಯನ್ನು ಸಲ್ಲಿಸುತ್ತಿರುವ ಬಗ್ಗೆ.

**ಉಲ್ಲೇಖ:–** Letter No.BESCOM/BC25/118/2023-24/3316-3318 Dated 05.02.2025.

********

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಶ್ರೀ.ಕೆ.ಎನ್.ರಮೇಶ್ ಬಾಬು ಮತ್ತು ಕೆ.ಎನ್.ಮಂಜುನಾಥ ಬಿನ್ ನಾರಾಯಣಪ್ಪ ಸರ್ವೆ.ನಂ.141 ನಲ್ಲಪ್ಪನಹಳ್ಳಿ ರವರು ಶ್ರೀ.ವೆಂಕಟೇಶ್ವರ ಗ್ರಾನೈಟ್ಸ್ ನಡೆಸುವ ಸಲುವಾಗಿ ಸ್ಥಾವರದ ಆರ್‌ಎಸ್‌ಡಿಹೆಚ್‌ಟಿ–14 ರಲ್ಲಿ ವಿದ್ಯುತ್ ಸಂಪರ್ಕವನ್ನು ಪಡೆದಿರುತ್ತಾರೆ.

ಸದರಿ ಸ್ಥಾವರಕ್ಕೆ ಜೂನ್–2019 ರಿಂದ ಸೆಪ್ಟೆಂಬರ್–2022 ರ ಅವಧಿಯಲ್ಲಿ 7,57,990 ರೂಗಳ ತೆರಿಗೆಯನ್ನು ತಪ್ಪಾಗಿ ವಿನಾಯಿತಿ ನೀಡಲಾಗಿದ್ದು, ಸದರಿ ಮೊತ್ತವನ್ನು ಜೂನ್–2023 ರಲ್ಲಿ ಬೇಡಿಕೆ ಮಾಡಲಾಗಿರುತ್ತದೆ.

ಸದರಿ ಗ್ರಾಹಕರು 7,54,113 ರೂ ಮೊತ್ತದ ಬಗ್ಗೆ ಉಚ್ಚ ನ್ಯಾಯಾಲಯ ಬೆಂಗಳೂರು ಇಲ್ಲಿ ಮೊಕ್ಕದ್ದಮೆ ಸಂಖ್ಯೆ WP No.21248/2023 ರಲ್ಲಿ ಮೊಕದ್ದಮೆಯನ್ನು ಹೂಡಿರುತ್ತಾರೆ.

ಉಚ್ಚ ನ್ಯಾಯಾಲಯ ಬೆಂಗಳೂರು ರವರು ದಿನಾಂಕ 05.10.2023 ರಂದು ಸದರಿ ಮೊತ್ತದಲ್ಲಿ ಶೇ.25% ರಷ್ಟು ಮೊತ್ತವನ್ನು ಒಂದು ವಾರದ ಒಳಗಾಗಿ ಠೇವಣಿ ಮಾಡುವಂತೆ ಸೂಚಿಸಿದ್ದು, ಸದರಿ ಗ್ರಾಹಕರು 1,88,529 ರೂಗಳನ್ನು ಉಚ್ಚ ನ್ಯಾಯಾಲಯದಲ್ಲಿ ಠೇವಣಿ ಮಾಡಿರುತ್ತಾರೆ.

ಉಚ್ಚ ನ್ಯಾಯಾಲಯ ಬೆಂಗಳೂರು ರವರು ಸದರಿ ಮೊಕದ್ದಮೆಯನ್ನು ಪರಿಶೀಲಿಸಿ ದಿನಾಂಕ 19.12.2024 ರಂದು ಅಂತಿಮ ಆದೇಶವನ್ನು ನೀಡಿರುತ್ತಾರೆ. ಸದರಿ ಆದೇಶದಲ್ಲಿ ನ್ಯಾಯಾಲಯದಲ್ಲಿ ಸಂದಾಯ ಮಾಡಿರುವ ಠೇವಣಿ ಮೊತ್ತ 1,88,529 ಹೊರತುಪಡಿಸಿ ಉಳಿಕೆ 5,65,584 ರೂಗಳನ್ನು ದಿನಾಂಕ 30.06.2025 ರ ಒಳಗಾಗಿ ಪಾವತಿಸುವಂತೆ ಸೂಚಿಸಿರುತ್ತಾರೆ.

ಉಚ್ಚ ನ್ಯಾಯಾಲಯದ ಆದೇಶದಂತೆ ಗ್ರಾಹಕರು ದಿನಾಂಕ 29.01.2025 ರಂದು ರಸೀದಿ ಸಂಖ್ಯೆ 20250000063 ರಲ್ಲಿ 1,00,000 ರೂ, ದಿನಾಂಕ 28.02.2025 ರಂದು ರಸೀದಿ ಸಂಖ್ಯೆ 1233101000291 ರಲ್ಲಿ 1,00,000 ರೂ, ದಿನಾಂಕ 25.03.2025 ರಂದು ರಸೀದಿ ಸಂಖ್ಯೆ 1233101000614 ರಲ್ಲಿ 1,00,000 ರೂ, ದಿನಾಂಕ 23.04.2025 ರಂದು ರಸೀದಿ ಸಂಖ್ಯೆ

1233101000828 ರಲ್ಲಿ 1,00,000 ರೂ, ದಿನಾಂಕ 20.05.2025 ರಂದು ರಸೀದಿ ಸಂಖ್ಯೆ 1233101000951 ರಲ್ಲಿ 1,00,000 ರೂ, ದಿನಾಂಕ 30.06.2025 ರಂದು ರಸೀದಿ ಸಂಖ್ಯೆ 1233101001222 ರಲ್ಲಿ 65,000 ರೂ, ದಿನಾಂಕ 30.06.2025 ರಂದು ರಸೀದಿ ಸಂಖ್ಯೆ 1233101001223 ರಲ್ಲಿ 584 ರೂ ಒಟ್ಟು 5,65,584 ರೂಗಳನ್ನು ಪಾವತಿಸಿರುತ್ತಾರೆ.

ಉಚ್ಚ ನ್ಯಾಯಾಲಯದಲ್ಲಿ ಸದರಿ ಗ್ರಾಹಕರು ಠೇವಣಿ ಮಾಡಿದ್ದ 1,88,529 ರೂಗಳಿಗೆ ಬಡ್ಡಿ ಸಹಿತ ದಿನಾಂಕ 17.11.2025 ರಂದು 2,11,402 ರೂಗಳು ಉಪವಿಭಾಗದ ಖಾತೆಗೆ NEFT ಮೂಲಕ ಸಂದಾಯವಾಗಿರುತ್ತದೆ. ಸದರಿ ಮೊತ್ತವನ್ನು ದಿನಾಂಕ 18.11.2025 ರಂದು ರಸೀದಿ ಸಂಖ್ಯೆ 1233101002083 ರಲ್ಲಿ ರಸೀದಿ ಡ್ರಾ ಮಾಡಲಾಗಿದ್ದು ಸದರಿ ಗ್ರಾಹಕರ ಖಾತೆಗೆ ಜಮೆ ಮಾಡಲಾಗಿರುತ್ತದೆ.

ಆದ್ದರಿಂದ ಸದರಿ ಗ್ರಾಹಕರು ನ್ಯಾಯಾಲಯದಲ್ಲಿ ದಾವೆ ಹೂಡಿದ್ದ ಪೂರ್ಣ ಮೊತ್ತವನ್ನು ಪಾವತಿಸಿರುತ್ತಾರೆಂದು ಅನುಸರಣಾ ವರದಿಯನ್ನು ತಮ್ಮ ಅವಗಾಹನೆಗೆ ಈ ಮೂಲಕ ಸಲ್ಲಿಸಲಾಗಿದೆ.

ತಮ್ಮ ವಿಶ್ವಾಸಿ,

**ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ),**
**ಗ್ರಾಮೀಣ ಉಪ-ವಿಭಾಗ, ಬೆವಿಕಂ, ಶಿಡ್ಲಘಟ್ಟ.**

**ಪ್ರತಿಗಳು:**

1. ಅಧೀಕ್ಷಕ ಇಂಜಿನಿಯರ್(ವಿ), ವಾ. ಕಾ & ಪಾ ವೃತ್ತ, ವೃತ್ತ ಕಛೇರಿ, ಬೆ.ವಿ.ಕಂ., ಕೋಲಾರ ರವರ ಅವಗಾಹನೆಗಾಗಿ ಸಲ್ಲಿಸಲಾಗಿದೆ.
2. ಕಾರ್ಯನಿರ್ವಾಹಕ ಇಂಜಿನಿಯರ್(ವಿ), ವಾ. ಕಾ. ಮತ್ತು ಪಾ ವಿಭಾಗ, ಚಿಂತಾಮಣಿ ವಿಭಾಗ ಕಛೇರಿ, ಬೆ.ವಿ.ಕಂ., ಚಿಂತಾಮಣಿ ರವರ ಅವಗಾಹನೆಗಾಗಿ ಸಲ್ಲಿಸಲಾಗಿದೆ.
3. ಕಛೇರಿ ಪ್ರತಿ.